▸ ಜುಲೈ ಸಂಚಿಕೆ ಎರಡು ಕಾರಣಗಳಿಗಾಗಿ ನನ್ನ ಮನಸ್ಸಿನ ತುಂಬಾ ಆವರಿಸಿಕೊಂಡಿದೆ. ಮೊದಲನೆಯದು, ಕಳೆದ ಮೂವತ್ತು ವರ್ಷಗಳಿಂದ ಆತ್ಮೀಯರಾಗಿದ್ದ ಲೇಖಕ ಎಸ್.ಎಫ್. ಯೋಗಪ್ಪನವರ ವ್ಯಕ್ತಿತ್ವ ಮತ್ತು ಬರವಣಿಗೆಯನ್ನು ಇಷ್ಟಪಟ್ಟವನು ನಾನು. ಅಂಥ ಅಪೂರ್ವ ಲೇಖಕನನ್ನು ಚನ್ನಪ್ಪ ಕಟ್ಟಿಯವರು 'ಸಾಹಿತ್ಯಯಾನದ ಒಬ್ಬಂಟಿ ಪಯಣಿಗ: ಎಸ್.ಎಫ್. ಯೋಗಪ್ಪನವರ್' ಲೇಖನದಲ್ಲಿ ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಹಾಗೆಯೇ, ಟರ್ಕಿಯ ಲೇಖಕ ಒರ್ಹಾನ್ ಪಮುಕ್‌ನ ಸಂದರ್ಶನ 'ಕಾದಂಬರಿ: ಏಕಾಂತ ಲೋಕಾಂತಗಳ ಸಂವಾದ' ಒಂದು ಸಮಾಜದ ಕ್ಲಿಷ್ಟ ರೀತಿಯ ಸಮಸ್ಯೆಗಳನ್ನು ಬಹಳ ದಟ್ಟವಾಗಿ ದಾಖಲಿಸುತ್ತದೆ. ಇವೆರಡೂ ಬರಹಗಳು ನನ್ನನ್ನು ಗಾಢ ಚಿಂತನೆಗೆ ಒಳಪಡಿಸಿವೆ.

**ಶೂದ್ರ ಶ್ರೀನಿವಾಸ್, ಬೆಂಗಳೂರು**

▸ ಕನ್ನಡ ಸಾಹಿತ್ಯಕ್ಕೆ ಅತ್ಯಂತ ಮೌಲಿಕ ಕೃತಿಗಳನ್ನು ಕೊಟ್ಟ ಯೋಗಪ್ಪನವರ ವ್ಯಕ್ತಿಚಿತ್ರಣವನ್ನು ಲೇಖಕ ಚನ್ನಪ್ಪ ಕಟ್ಟಿ ಆಕರ್ಷಕವಾಗಿ ಕಟ್ಟಿಕೊಟ್ಟಿದ್ದಾರೆ.

**ವೈ.ಬಿ.ಎಚ್. ಜಯದೇವ್, ಬೆಂಗಳೂರು**

▸ ಈ ಸಂಚಿಕೆಯಲ್ಲಿನ ಕತೆ, ಕವಿತೆ, ಲೇಖನ, ಸಂದರ್ಶನ, ಪುಸ್ತಕ ಪರಿಚಯಗಳು ವೈವಿಧ್ಯಮಯವಾಗಿಯೂ ಬೋಧಪ್ರದವಾಗಿಯೂ ಇರುವುದು ವಿಶೇಷ. ರವಿ ಬೆಸಗರಹಳ್ಳಿ, ಮಹಾಂತೇಶ ಪಾಟೀಲರ ಕವಿತೆಯ ಸಾಲುಗಳು ಅಯಸ್ಕಾಂತದಂತೆ ಸೆಳೆದವು.

**ಬಿ.ಆರ್. ಅಣ್ಣಾಸಾಗರ, ಸೇಡಂ**

▸ ಕೃಷ್ಣಮೂರ್ತಿ ಹನೂರು ಅವರ 'ಜಿತಸೇನ ಮಹಾರಾಜರ ಕತೆ', ಸದಾನಂದ ಆರ್.




ಅವರ 'ದೇವರಿಲ್ಲದ ಊರಿನಲ್ಲಿ' ಕತೆಗಳು ದೇಶದ ಪ್ರಸ್ತುತ ಸ್ಥಿತಿಯನ್ನು ಅರ್ಥಪೂರ್ಣವಾಗಿ ವಿಡಂಬಿಸುತ್ತವೆ.

**ಸುಧಾ ಎಚ್.ಎಸ್., ನೆಲ್ಲೂರು**

▸ ವಸುಮತಿ ಉಡುಪ ಅವರ ಕತೆ 'ಮದರಂಗಿ ಮತ್ತು ಸೋದರಮಾವ' ಹೆಣ್ಣಿನ ಅಂತರಂಗದ ಅಭಿಲಾಷೆ, ತುಮುಲಗಳನ್ನು ಮನೋಜ್ಞವಾಗಿ ಚಿತ್ರಿಸಿದೆ.

**ಶಾಂತಲಾ ರಾಜಗೋಪಾಲ್, ಬೆಂಗಳೂರು**

▸ ಅಬ್ದುಲ್ ರಶೀದ್ ಅವರ ನೀಳ್ಗತೆ 'ರಕ್ತಚಂದನ'ದಲ್ಲಿ ಸ್ತ್ರೀ ಸಂವೇದನೆ ಉತ್ತಮವಾಗಿ ಅಭಿವ್ಯಕ್ತಗೊಂಡಿದೆ.

**ಲಂಬೋದರ ಡಿ.ಕೆ., ಬೆಂಗಳೂರು**

▸ ಪಿ.ಪಿ. ಉಪಾಧ್ಯ ಅವರ ಕತೆ 'ಒಬ್ಬ ಅನಾಥ ಮುದುಕಿ' ಚೆನ್ನಾಗಿ ಮೂಡಿ ಬಂದಿದೆ. ಕತೆಯ ಅಂತ್ಯವೂ ಬಹಳ ಸೊಗಸಾಗಿದೆ.

**ಸಾವಿತ್ರಿ ಶ್ಯಾನಭಾಗ್, ಕುಂದಾಪುರ**

▸ ಕೆ.ವಿ. ರಾಜಲಕ್ಷ್ಮಿ (ಕಾಣೆಯಾದವರು), ನೀತಾ ರಾವ್ (ಹರಿವ ನೀರು) ಅವರ ಕತೆಗಳಲ್ಲಿ ಹೆಣ್ಣಿನ ಮನದ ಒಳಪದರಗಳನ್ನು ಸೂಕ್ಷ್ಮವಾಗಿ ಹೆಣೆಯಲಾಗಿದೆ.

**ಅನುಪಮಾ ವಿ.ಎಸ್., ಧಾರವಾಡ**